# ಹೋಟೆಲ್ ಕೆಲಸದಿಂದ ಸಿನಿಮಾ ಅಖಾಡಕ್ಕೆ...

ದೆಹಲಿಯ ಲ ಮೆರಿಡಿಯನ್ ಹೋಟೆಲ್‌ನಲ್ಲಿ ಕೆಲಸ ಮಾಡಿದ ಅನುಭವ ಇದ್ದ ಶೂಜಿತ್ ಸರ್ಕಾರ್ ಬಂಗಾಳಿ ಯುವಕ. ಫುಟ್‌ಬಾಲ್ ಅವರಿಗೆ ಮೆಚ್ಚು. ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ ಕಡೆಗೆ ಒಮ್ಮೆ ಸುಮ್ಮನೆ ಹೆಜ್ಜೆ ಹಾಕಿದ ಅವರಿಗೆ ನಾಟಕದ ತಾಲೀಮು ನಡೆಯುತ್ತಿದ್ದುದು ಗೊತ್ತಾಯಿತು. ನಾಸಿರುದ್ದೀನ್ ಶಾ, ಓಂಪುರಿ, ಅಮರೀಷ್ ಪುರಿ ಎಲ್ಲರೂ ಅಭಿನಯಿಸಿದ್ದ ನಾಟಕವೊಂದನ್ನು ನೋಡಿದರು.

ಆಮೇಲೆ ಸಿನಿಮಾಗಳನ್ನು ನೋಡಲಾರಂಭಿಸಿದರು. ಸತ್ಯಜಿತ್ ರೇ ನಿರ್ದೇಶನದ ಎಲ್ಲ ಚಲನಚಿತ್ರಗಳನ್ನು ಮೊದಲು ನೋಡಿದರು. ಚಲನಚಿತ್ರ ನಿರ್ಮಾಣದ ಕಷ್ಟಗಳು, ನಿರ್ದೇಶನದ ಪಟ್ಟುಗಳನ್ನು ಕುರಿತು ಬಂದಿದ್ದ ಕೃತಿಗಳನ್ನು ಓದಿಕೊಂಡರು. 'ಆಕ್ಟ್ ಒನ್' ಎಂಬ ತಮ್ಮದೇ ರಂಗತಂಡ ಕಟ್ಟಿದರು. ಸಣ್ಣ ಸಣ್ಣ ಸಂಗತಿಗಳನ್ನೇ ನಾಟಕಗಳಾಗಿಸಿದರು. ಅವುಗಳಲ್ಲೂ ಸತ್ಯಜಿತ್ ರೇ ಪ್ರಭಾವವಿತ್ತು.

'ಸತ್ಯಜಿತ್ ರೇ ಬದುಕಿದ್ದ ಕಾಲದಲ್ಲಿ ನಾನೂ ಇರಬೇಕಿತ್ತು. ಅವರಿಗೆ ಸಹಾಯಕ ನಿರ್ದೇಶಕ ಆಗಬೇಕಿತ್ತು' ಎಂದು ಹೇಳಿಕೊಂಡಿದ್ದ ಅವರು ಮಹತ್ವಾಕಾಂಕ್ಷಿ.

ಶೂಜಿತ್ ಪತ್ರಿಕೆಗಳನ್ನು ಆಳವಾಗಿ ಓದುತ್ತಿದ್ದರು. ಅದರ ಪರಿಣಾಮದಿಂದಲೇ 'ಯಹಾಂ' ಎಂಬ ಮೊದಲ ಸಿನಿಮಾ ನಿರ್ದೇಶಿಸಿದ್ದು. ಆಮೇಲೆ ಅಮಿತಾಭ್ ಬಚ್ಚನ್ ಕಾಲ್ ಷೀಟ್ ಕೊಟ್ಟರು. 'ಶೋಭಿತೆ' ಎಂಬ ಸಿನಿಮಾ ತಯಾರಾಯಿತು. ಸಿನಿಮಾದ ಸಾರಾಂಶ ಕುರಿತು ನ್ಯಾಯಾಲಯದಲ್ಲಿ ತಕರಾರು ಅರ್ಜಿಯ ವಿಚಾರಣೆ ನಡೆಯುವುದು ವಿಳಂಬ ಆದದ್ದರಿಂದ 'ಶೋಭಿತೆ' ತೆರೆಕಾಣಲೇ ಇಲ್ಲ.

'ವಿಕಿ ಡೋನರ್' ತೆರೆಕಂಡಾಗಲೂ ಶೂಜಿತ್ ಫುಟ್‌ಬಾಲ್ ಆಡುತ್ತಾ, 'ಈ ಸಿನಿಮಾ ಸೋತರೆ ಬರೀ ಆಟ ಆಡಿಕೊಂಡೇ ಇರಬೇಕಾಗುತ್ತದೆ' ಎಂದು ಭಾವಿಸಿದ್ದರು. ಆದರೆ, ಚಲನಚಿತ್ರ ನಿರೀಕ್ಷೆಯನ್ನೂ ಮೀರಿ ಗೆದ್ದಿತು. ಹಣ ಕೂಡ ಗಳಿಸಿತು. ಶೂಜಿತ್ ಬದುಕು ಬದಲಾಯಿತು. ಅವರು ನಿರ್ದೇಶಕರಾಗಿ ಅಷ್ಟೇ ಅಲ್ಲದೆ ನಿರ್ಮಾಪಕರಾಗಿಯೂ ಬೆಳೆದರು. 'ಪಿಂಕ್' ತರಹದ ಸಿನಿಮಾ ನಿರ್ಮಿಸಿದರು. 'ಮದ್ರಾಸ್ ಕೆಫೆ'ಯಂಥ ಯುದ್ಧಸೂಕ್ಷ್ಮದ ಹಿಂದಿ ಚಲನಚಿತ್ರಕ್ಕೂ ಬಂಡವಾಳ ತೊಡಗಿಸಿದರು. ಮತ್ತೆ ಅಮಿತಾಭ್ ಬಚ್ಚನ್ ಕಾಲ್ ಷೀಟ್ ಪಡೆದು 'ಪೀಕು' ಹಿಂದಿ ಸಿನಿಮಾಗೆ ಆಕ್ಷನ್, ಕಟ್ ಹೇಳಿದರು. ದೀಪಿಕಾ ಪಡುಕೋಣೆ ನಟಿಯಾಗಿ ಜಿಗಿದ ಆ ಸಿನಿಮಾ ಜನಪ್ರಿಯವಾಯಿತು.

ಒಂದು ಸಿನಿಮಾದಂತೆ ಇನ್ನೊಂದು ಇರಕೂಡದು ಎಂದು ಸಂಕಲ್ಪ ಮಾಡಿದವರಂತೆ ನಿರ್ದೇಶಿಸುತ್ತಿರುವ ಅವರ ಉಮೇದಿಗೆ 'ಅಕ್ಟೋಬರ್' ತಾಜಾ ಉದಾಹರಣೆ.

